# ಸಾಮಾನ್ಯರು: ಸದಾ ಬಡವರು!

ಮಾನವ ಚರಿತ್ರೆಯನ್ನು, ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದ ಮಹಾತ್ಮ ಗಾಂಧಿ ಅವರು ‘ಬಹುಪಾಲು ಜನಸ್ತೋಮ ಯಾವಾಗಲೂ ಬಡವಾಗಿಯೇ ಇರುತ್ತದೆ’ ಎಂದು ನುಡಿದಿದ್ದಾರೆ. ಗಾಂಧಿ ಅವರ ಮಾತಿನಲ್ಲಿ ಚಾರಿತ್ರಿಕ ಸತ್ಯವೊಂದು ವ್ಯಕ್ತವಾಗಿದೆ. ಅಂದರೆ ಚರಿತ್ರೆಯುದ್ದಕ್ಕೂ ಜನ ಸಾಮಾನ್ಯ ವರ್ಗ ಬಡವರಾಗಿಯೇ ಬದುಕಿದ್ದಾರೆ. ಸಾಮಾನ್ಯ ಜನರು ಬಡವರಾಗಿರುವುದರಲ್ಲೇ ತೃಪ್ತಿ ಪಟ್ಟುಕೊಂಡಿದ್ದರು ಎಂಬುದು ಎಂಬುದು ಗಾಂಧೀಜಿಯವರ ಮಾತಿನ ಆಶಯವಾಗಿರಲು ಸಾಧ್ಯವಿಲ್ಲ. ಸಾಮಾನ್ಯರ ಆಸೆಗಳು ಮಹತ್ತರ ಆಗಿರುವುದಿಲ್ಲ. ಅವರು ತಮ್ಮ ಸರಳ ಅಗತ್ಯತೆಗಳ ಪೂರೈಕೆಯಲ್ಲಿ ತೃಪ್ತಿಪಡುವಂಥವರು. ಹೀಗಾಗಿ ಅವರು ಅನೈತಿಕ ಹಾದಿಗಳಲ್ಲಿ ಅಷ್ಟಾಗಿ ನಡೆಯುವವರಲ್ಲ, ಅವರ ಆಸೆಗಳು ಕನಿಷ್ಟ ಊಟ ಬಟ್ಟೆ ವಸತಿಗಳಲ್ಲಿ ಮುಕ್ತಾಯಗೊಳ್ಳುತ್ತಿದ್ದವು– ಎಂಬುದು ಸತ್ಯವಾಗಿಯೂ ಇರಬಹುದು.

ಆದರೆ ಇಂಥ ಕನಿಷ್ಟ ಆಸೆಗಳಲ್ಲೇ ತೃಪ್ತಿಕೊಳ್ಳಬಹುದಾದಂಥ ಅಸಹಾಯಕ ಸ್ಥಿತಿಗೆ ಅವರನ್ನು ತಳ್ಳಿದವರಾರು? ಇಡೀ ತಮ್ಮ ಬದುಕಿನುದ್ದಕ್ಕೂ ದಿನ ನಿತ್ಯದ ಅಗತ್ಯತೆಗಳನ್ನು ಹೊಂದಾಣಿಕೆ ಮಾಡಿಕೊಳ್ಳುವುದರಲ್ಲೇ ಎಣಗುವಂಥ ಪರಿಸ್ಥಿತಿ ಅವರಿಗೇಕೆ ಬಂತು? ಹಸಿವನ್ನು ನೀಗಿಕೊಳ್ಳಲು ಒಂದು ಹಿಡಿ ಕೂಳು, ಚಳಿ ಗಾಳಿಯಿಂದ ರಕ್ಷಿಸಿಕೊಳ್ಳಲು ಎಂಥದೋ ಒಂದು ಬಗೆಯ ಬಟ್ಟೆ, ರಕ್ಷಿತವಾಗಿ ಮಲಗಿ ನಿದ್ರಿಸಲು ಒಂದು ನೆಲೆ– ಬದುಕಿಗೆ ದೊರೆತರೆ ಸಾಕು ಎಂಬ ಸ್ಥಿತಿಗೆ ಅವರನ್ನು ತಂದವರಾರು? ಒಂದಂತು ನಿಜ– ಹಸಿವಾದಾಗ ಅನ್ನ ದೊರೆತರೆ, ಅದೇ ಪರಮ ತೃಪ್ತಿ! ಚಳಿಗಾಳಿಯಿಂದ ತಪ್ಪಿಸಿಕೊಳ್ಳಲು ಬೆಚ್ಚಗಾಗುವ ಹೊದಿಕೆಯೊಂದು ದೊರೆತರೆ ಆನಂದದ ನಿದ್ರೆ ಬರುವುದರಲ್ಲಿ ಅನುಮಾನವಿಲ್ಲ. ಆದರೆ ಇವರ ಬಡತನದ ಸ್ಥಿತಿಗೆ ಅವರ ಸೋಮಾರಿತನವು ಕಾರಣವಲ್ಲ; ಅವರ ಶ್ರಮರಹಿತ ಜೀವನ ಕಾರಣವಲ್ಲ. ಅವರು ಸದಾ ದಿನಕ್ಕೆ ಹತ್ತರಿಂದ ಹದಿನೈದು ಗಂಟೆ ದುಡಿಯುತ್ತಿದ್ದರು. ಆದರೆ ಅವರ ದುಡಿಮೆಯ ಫಲ ಅವರಿಗೆ ದಕ್ಕುತ್ತಿರಲಿಲ್ಲ. ಅವರ ದುಡಿಮೆಯ ಫಲ ಸಾಮಾಜಿಕ– ಧಾರ್ಮಿಕ ಕಾರಣಗಳಿಂದ ನಿರಾಕರಿಸಲ್ಪಟ್ಟವು. ಬಹುಪಾಲು ಸಾಮಾನ್ಯರ ದುಡಿಮೆಯು ಕಡಿಮೆ ಜನರ ಸುಖ–ಭೋಗ ಲಾಲಸೆಗಳಿಗೆ ಉತ್ಪನ್ನದ ಸಾಧನವಾಗಿ ಪರಿಗಣಿಸಲ್ಪಟ್ಟಿತು. ಇದು ಚರಿತ್ರೆಯ ಸತ್ಯ; ಇದು ಮಾನವತೆಯ ಕಹಿ ವ್ಯಂಗ್ಯ. ಮತೀಯ ಮೂಲ ತಂತ್ರಗಾರಿಕೆ ಮಾನವತೆಯನ್ನು ಹಿಂಸಿಸಿರುವಷ್ಟು ದೈಹಿಕ–ಭೌತಿಕ ಹಿಂಸೆ ಯಾತನೆಯನ್ನುಂಟು ಮಾಡಿಲ್ಲ. ಸಾಮಾನ್ಯರು ಬಡವರಾಗಿರುವುದರಲ್ಲೇ ಸುಖ ಕಾಣುವುದರ ಮನೋ ನೆಲೆಯನ್ನು ಶತ ಶತಮಾನಗಳಲ್ಲಿ ಹದಗೊಳಿಸಿ ಗಟ್ಟಿಗೊಳಿಸಲಾಯಿತು. ಸುಖ ದುಃಖಗಳಿಗೂ ಜನ್ಮಾಂತರಗಳ ಪಾಪ ಪುಣ್ಯಗಳಿಗೂ ಸಂಬಂಧದ ಕುಣಿಕೆ ಎಣೆಯಲಾಯಿತು. ತನ್ನ ಇಂದಿನ ದುಡಿಮೆಗೆ ಸಿಗುವ ಒಂದು ತುತ್ತು ಅನ್ನ ಹಿಂದಿನ ಜನ್ಮದ ಪುಣ್ಯ ಸಂಚಯ; ನೋವು ಹಿಂಸೆಗಳು ಕರ್ಮ ಸಂಚಯವೆಂಬ ನಂಬಿಕೆಯನ್ನು ಆಳವಾಗಿ ಬೇರು ಬಿಡಿಸಲಾಯಿತು. ನಿಷ್ಕಾಮ ದುಡಿಮೆಯಿಂದ ಅಮೂರ್ತ ಸ್ವರ್ಗದಲ್ಲಿ ಸಿಗಬಹುದಾದ ಸುಖಗಳ ಆಕರ್ಷಕ ವರ್ಣನೆಯನ್ನು ನೇಯ್ದು, ಸಾಮಾನ್ಯರನ್ನು ಸದಾ ದುಡಿಯುವ ಮಂತ್ರಗಳನ್ನಾಗಿ ಮಾರ್ಪಡಿಸಲಾಯಿತು. ಅವರ ಎದೆಯಲ್ಲಿ ಮೂಡಬಹುದಾಗಿದ್ದ ಮಹತ್ವಾಕಾಂಕ್ಷೆಯನ್ನು– ಅಪಾರ ಸುಖ ಬಯಕೆಯನ್ನು ಮೊಳಕೆಯಾಗದಂತೆ ಎಚ್ಚರಿಕೆ ವಹಿಸಲಾಯಿತು.

ಇದಕ್ಕೆ ವ್ಯತಿರಿಕ್ತವಾಗಿ ಶ್ರೀಮಂತರು– ಧಾರ್ಮಿಕ ಸಂಸ್ಥೆಗಳನ್ನು ನಡೆಸುವಂಥವರು ಭೋಗ ಜೀವನವನ್ನು ಅನುಭವಿಸಿದರು. ಮಾನವತೆಯ ಉದ್ಧಾರವೆಂಬ ಮುಖವಾಡದ ಮರೆಯಲ್ಲಿ ಬಡವರಿಗೆ ನಿರಾಕರಿಸಲಾಗಿದ್ದ ಸಮಸ್ತ ಸುಖವನ್ನು ಬಡವರ ದುಡಿಮೆಯ ಫಲದಿಂದಲೇ ಅನುಭವಿಸಿದರು. ಉಳ್ಳವರಿಗೊಂದು ನೀತಿ ಸಾಮಾನ್ಯರಿಗೊಂದು ನೀತಿ ಚರಿತ್ರೆಯುದ್ದಕ್ಕೂ ಕೆಲಸ ಮಾಡುತ್ತಾ ಬಂದಿದೆ. ಭಾರತೀಯ ಸಂವಿಧಾನ ಕೂಡ ಸಮಾನತೆಯನ್ನು ಬೋಧಿಸುವ ಸಂದರ್ಭದಲ್ಲೇ ಕೆಲವರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿದೆ. ಈ ವಿಶೇಷ ಸೌಲಭ್ಯವೆಂಬುದು ಸಾಮಾನ್ಯರಿಗೆ ಅನ್ವಯಿಸುವುದಿಲ್ಲ. ದುಡ್ಡಿರುವ ಶ್ರೀಮಂತರು ತಪ್ಪು ಮಾಡಿ ಶಿಕ್ಷೆ ಅನುಭವಿಸುವಂಥ ಸಂದರ್ಭಗಳು ಸೃಷ್ಟಿಯಾದಲ್ಲಿ– ಕಾರಾಗೃಹದಲ್ಲೂ ಅವರು ಸುಖದ ವಾತಾವರಣವನ್ನು ನಿರ್ಮಿಸಿಕೊಳ್ಳಬಹುದು. ಆದರೆ ಸಾಮಾನ್ಯ? ಅವನು ಅಲ್ಪದರಲ್ಲೇ ತೃಪ್ತಿಪಡುವಂಥ ಮನಸ್ಥಿತಿಯನ್ನು ರೂಪಿಸಿಕೊಳ್ಳ ಬೇಕಾಗುತ್ತದೆ. ಈ ಕಾನೂನು ಅಳವಡಿಕೆಯ ತಂತ್ರಗಾರಿಕೆ ದೇಶದಿಂದ ದೇಶಕ್ಕೆ ಭಿನ್ನವಾಗಬಹುದು. ಆದರೆ ಬಡವನ ಅಲ್ಪತೃಪ್ತಿಯು ಚರಿತ್ರೆಯ ಮುಂದುವರಿಕೆಯಾಗಿಯೇ ಇರುತ್ತದೆ!

ಆಸೆಗಳು ಇರಬಾರದು, ಇದ್ದರೂ ಅವು ಮೂಲಭೂತ ಅಗತ್ಯತೆಗಳ ಪೂರೈಕೆಯ ಆಕಾಂಕ್ಷೆಯ ಮಿತಿಯೊಳಗಿರಬೇಕು. ಬಹುಶಃ ಬುದ್ಧನ ಮಾತಿನ ಅಂತರಾಳವೂ ಇದೇ ಆಗಿರಬೇಕು. ಅಸಮಾನತೆ ಸೃಷ್ಟಿಯಾಗಿರುವುದೇ ಶ್ರೀಮಂತಿಕೆಯ ದುರಾಸೆಯಿಂದ ಅಲ್ಲವೆ?

■ ಶಿಕಾಕು

## ಮಾತೇ ಮುತ್ತು

★ ತ್ಯಾಗ, ಪ್ರೀತಿ, ಕರುಣೆ, ಪ್ರಾಮಾಣಿಕತೆಗಳೇ ನಿಜವಾದ ಶಿಕ್ಷಣ.
-ಸ್ವಾಮಿ ವಿವೇಕಾನಂದ

★ ಇತರರನ್ನು ನಿಂದಿಸುವುದರ ಮೂಲಕ ತನ್ನ ಉತ್ಕರ್ಷವನ್ನು ಸಾಧಿಸಲು ಹವಣಿಸಬಾರದು.
-ಮಹಾಭಾರತ

★ ಬಹಳ ಕಷ್ಟಪಟ್ಟು ಮಾನವನು ಸಂಪಾದಿಸಿದ ಕೀರ್ತಿ, ತಪಸ್ಸು ಎಲ್ಲವನ್ನೂ ಕೋಪವು ನಾಶಗೊಳಿಸುತ್ತದೆ.
-ವಿಷ್ಣುಪುರಾಣ

★ ಮದುವೆ ಆದವರು ಜೊತೆಯಲ್ಲಿ ಜೀವಿಸದಿದ್ದರೆ ಯಶಸ್ವಿ ಮದುವೆಗಳ ಸಂಖ್ಯೆ ಇನ್ನೂ ಹೆಚ್ಚಾಗಿರುತ್ತಿತ್ತು.
-ನೀಟ್ಷೆ

★ ಪ್ರೇಮ ಗಂಡಸಿನ ಜೀವನದಲ್ಲಿ ಒಂದು ಭಾಗವಾದರೆ, ಹೆಂಗಸಿನ ಜೀವನವೇ ಪ್ರೇಮ.
-ಬೈರನ್

★ ಕೆಟ್ಟ ಕೆಲಸದಲ್ಲಿ ಆದ ಗೆಲುವಿಗಿಂತ ಒಳ್ಳೆಯ ಕೆಲಸದಲ್ಲಿ ಆಗುವ ಸೋಲು ಮೇಲು.
-ಹರ್ಡೇಕರ್ ಮಂಜಪ್ಪ

★ ದುಷ್ಟ ಜನರು ಒಳ್ಳೆಯ ಮಾತನ್ನಾಡಿದರೂ ಅದು ನಂಬತಕ್ಕದ್ದಲ್ಲ. ಅವರ ನಾಲಿಗೆಯ ತುದಿಯಲ್ಲಿ ಜೇನೂ, ಹೃದಯದಲ್ಲಿ ವಿಷವೂ ತುಂಬಿರುತ್ತದೆ.
-ಹಿತೋಪದೇಶ

★ ಸೌಂದರ್ಯ ಪ್ರಕೃತಿ ನಿರ್ಮಿಸಿದ ನಾಣ್ಯ. ಕೂಡಿಟ್ಟುಕೊಳ್ಳುವಂಥದಲ್ಲ, ಸದಾ ಬದಲಾವಣೆ ಆಗುತ್ತಿರುವಂಥದು.
-ಜಾನ್ ಮಿಲ್ಟನ್

★ ಮದುವೆ ಆದವ ಒಳ್ಳೆಯದನ್ನು ಮಾಡುತ್ತಾನೆ; ಮದುವೆ ಆಗದವ ಮತ್ತಷ್ಟು ಒಳ್ಳೆಯದನ್ನು ಮಾಡುತ್ತಾನೆ.
-ಪೊಲೀಷ್ ಗಾದೆ

★ ಕುರುಡಿ ಹೆಂಗಸು, ಕಿವುಡ ಗಂಡಸು ಇವರ ನಡುವೆ ಮಾತ್ರ ಒಳ್ಳೆಯ ಮದುವೆ ಸಾಧ್ಯ.
-ಮಾಂಟೇಯ್ನ್

★ ‘ಪ್ರೇಮ’ ಎಷ್ಟೇ ಪ್ರಖರವಾಗಿರಲಿ, ‘ಮದುವೆ’ ಅದನ್ನು ಹತೋಟಿಗೆ ತರುತ್ತದೆ.
-ರಷ್ಯನ್ ಗಾದೆ

★ ಮರಣ ಅತ್ಯಂತ ದುಃಖಕರವೇನಲ್ಲ; ಮರಣವನ್ನು ಅಪೇಕ್ಷಿಸಿಯೂ ಅದು ದೊರೆಯದ ಸ್ಥಿತಿ ಅತ್ಯಂತ ದುಃಖಕರ.
-ಸಾಫೋಕ್ಲಿಸ್

★ ಮಕ್ಕಳು ಕತ್ತಲೆಯಲ್ಲಿ ಹೋಗಲು ಹೆದರುವಂತೆ ಜನರು ಮರಣವನ್ನು ಕಂಡರೆ ಹೆದರುತ್ತಾರೆ.
-ಬೇಕನ್

★ ಮಾಡತಕ್ಕದಲ್ಲದ್ದನ್ನು ಮಾಡಿದರೂ ಕೇಡುಂಟು; ಮಾಡತಕ್ಕದ್ದನ್ನು ಮಾಡದಿದ್ದರೂ ಕೇಡುಂಟು.
-ತಿರುವಳ್ಳುವರ್